# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 183 |
| ಸದಸ್ಯರ ಹೆಸರು | : ಶ್ರೀ ಎಂ.ನಾಗರಾಜು |
| ಉತ್ತರಿಸುವ ಸಚಿವರು | : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು |
| ಉತ್ತರಿಸುವ ದಿನಾಂಕ | : 05-03-2025 |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | ರಾಜ್ಯ ರಾಜಧಾನಿಯ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯಲ್ಲಿ ಒಟ್ಟು ಇರುವ. ಬಸ್ಸು ಸಂಖ್ಯೆ ಎಷ್ಟು; ಗುತ್ತಿಗೆ ಪಡೆದ ಬಸ್ಸುಗಳು ಎಷ್ಟು ಮತ್ತು ಬಿ.ಎಂ.ಟಿ.ಸಿ ಒಡೆತನದ ಬಸ್ಸುಗಳು ಎಷ್ಟು; | ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯಲ್ಲಿ ಫೆಬ್ರುವರಿ-2025ರ ಅಂತ್ಯಕ್ಕೆ ಒಟ್ಟು 6811 ಬಸ್ಸುಗಳಿದ್ದು, ಅವುಗಳಲ್ಲಿ 1269 ವಿದ್ಯುತ್‌ಚಾಲಿತ ಬಸ್ಸುಗಳನ್ನು ಜಿ.ಸಿ.ಸಿ ಆಧಾರದ ಮೇಲೆ (ಗುತ್ತಿಗೆ) ಕಾರ್ಯಾಚರಣೆ ಮಾಡಲಾಗುತ್ತಿದೆ ಹಾಗೂ 5542 ಡೀಸೆಲ್ ಬಸ್ಸುಗಳು ಸಂಸ್ಥೆಯ ಒಡೆತನದ ಬಸ್ಸುಗಳಾಗಿರುತ್ತವೆ. ಸದರಿ ಡೀಸೆಲ್ ಬಸ್ಸುಗಳನ್ನು 2009 ರಿಂದ 2025 (ಜನವರಿ-2025) ರವರೆಗಿನ ಅವಧಿಯಲ್ಲಿ ಖರೀದಿಸಲಾಗಿರುತ್ತದೆ. |
| ಆ. | ಸದರಿ ಬಸ್ಸುಗಳಲ್ಲಿ ಡೀಸೆಲ್ ಬಸ್ಸುಗಳ ಸಂಖ್ಯೆ ಮತ್ತು ಯಾವ ವರ್ಷದಲ್ಲಿ ಖರೀದಿಸಲಾಗಿದೆ; ಸದರಿ ಸಂಸ್ಥೆಯಲ್ಲಿ ವಿದ್ಯುತ್ ಚಾಲಿತ ಬಸ್ಸುಗಳ ಸಂಖ್ಯೆ ಎಷ್ಟು; | |
| ಇ. | ಡೀಸೆಲ್ ಬಸ್ಸುಗಳು ಸುಮಾರು ಹಲವು ಲಕ್ಷ ಕಿ.ಮೀ. ಓಡಿದ ನಂತರ ಇವುಗಳನ್ನು ವಿದ್ಯುತ್ ಚಾಲಿತ ವಾಹನಗಳನ್ನಾಗಿ ಪರಿವರ್ತಿಸುತ್ತಿರುವುದು ದೇಶದ ಹಲವು ರಾಜ್ಯಗಳಲ್ಲಿ ಕಾಣಬಹುದಾಗಿದ್ದು, ಇದೇ ರೀತಿ ಕರ್ನಾಟಕ ರಾಜ್ಯದಲ್ಲಿ ದಿನನಿತ್ಯ ಬೆಂಗಳೂರಿನಲ್ಲಿ ಓಡಾಡುತ್ತಿರುವ ಡೀಸೆಲ್ ಬಸ್ಸುಗಳನ್ನು ವಿದ್ಯುತ್ ಚಾಲಿತ ವಾಹನಗಳನ್ನಾಗಿ ಪರಿವರ್ತಿಸುವ ಯೋಜನೆ ಸರ್ಕಾರದ ಮುಂದಿದೆಯೇ; ಇದ್ದಲ್ಲಿ, ಯಾವ ಯಾವ ರಾಜ್ಯಗಳಿಂದ ಈ ಯೋಜನೆ ಕುರಿತು ಮಾಹಿತಿ ಪಡೆಯಲಾಗಿದೆ; (ರಾಜ್ಯವಾರು ಮಾಹಿತಿ ನೀಡುವುದು) | ಪ್ರಸ್ತುತ ಡೀಸೆಲ್ ಬಸ್ಸುಗಳನ್ನು ವಿದ್ಯುತ್ ಚಾಲಿತ ಬಸ್ಸುಗಳನ್ನಾಗಿ ಪರಿವರ್ತಿಸುವ ಯಾವುದೇ ಪ್ರಸ್ತಾವನೆ ಇರುವುದಿಲ್ಲ. ಆದ್ದರಿಂದ ಬೇರೆ ರಾಜ್ಯಗಳಿಂದ ಈ ಯೋಜನೆ ಕುರಿತು ಮಾಹಿತಿ ಪಡೆಯುವ ಪ್ರಶ್ನೆ ಉದ್ಭವಿಸುವುದಿಲ್ಲ. |
| ಈ. | ಬಿ.ಎಂ.ಟಿ.ಸಿ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳು ಎಷ್ಟು ಮತ್ತು | ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯಲ್ಲಿ 2023-24ರ ಪೂರ್ವದ 04 ವರ್ಷಗಳಿಂದ ಸಿಬ್ಬಂದಿ |

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td></td><td>ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು; ಖಾಲಿ ಇರುವ ಹುದ್ದೆಗಳನ್ನು ಎಷ್ಟು ಕಾಲಮಿತಿಯಲ್ಲಿ ನೇಮಕಾತಿ ಮಾಡಲಾಗುವುದು?<br>(ಹುದ್ದೆವಾರು ಮಾಹಿತಿ ನೀಡುವುದು)</td><td>ನೇಮಕಾತಿ ಆಗಿರಲಿಲ್ಲ.<br><br>ಪ್ರಸ್ತುತ ಜನವರಿ-2025ರ ಅಂತ್ಯಕ್ಕೆ ಒಟ್ಟು ಕಾರ್ಯನಿರ್ವಹಣೆ ಮತ್ತು ಖಾಲಿ ಹುದ್ದೆಗಳ ವೃಂದವಾರು ವಿವರ ಈ ಕೆಳಕಂಡಂತಿದೆ:
<table>
<tr><th>ವೃಂದ/ ಗ್ರೂಪ್</th><th>ಕಾರ್ಯನಿರ್ವಹಣೆ</th><th>ಖಾಲಿ ಹುದ್ದೆಗಳು</th></tr>
<tr><td>ಗ್ರೂಪ್-'ಎ'</td><td>56</td><td>11</td></tr>
<tr><td>ಗ್ರೂಪ್-'ಬಿ'</td><td>71</td><td>18</td></tr>
<tr><td>ಗ್ರೂಪ್-'ಸಿ'</td><td>27889</td><td>3354</td></tr>
<tr><td>ಗ್ರೂಪ್-'ಡಿ'</td><td>100</td><td>4</td></tr>
<tr><td>ಒಟ್ಟು</td><td>28116</td><td>3387</td></tr>
</table>
<br>ಈಗಾಗಲೇ ಸಂಸ್ಥೆಯಲ್ಲಿ 2286 ಚಾಲನಾ (ನಿರ್ವಾಹಕ) ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳನ್ನು ಆಯ್ಕೆಗೊಳಿಸುವ ಪ್ರಕ್ರಿಯೆಯು ಅಂತಿಮ ಹಂತದಲ್ಲಿದೆ.<br><br>ಕಳೆದ ಎರಡು ವರ್ಷದಲ್ಲಿ 315 ಜನರನ್ನು ಅನುಕಂಪದ ಆಧಾರದ ಮೇಲೆ ನೇಮಿಸಿಕೊಳ್ಳಲಾಗಿದೆ.<br><br>ಅಲ್ಲದೇ, ಸಂಸ್ಥೆಯಲ್ಲಿ ಪ್ರಸ್ತುತ ಖಾಲಿ ಇರುವ ಹುದ್ದೆಗಳ ಪೈಕಿ ಸಂಸ್ಥೆಗೆ ಅತ್ಯಾವಶ್ಯಕವಾಗಿರುವ ಗ್ರೂಪ್-ಬಿ 09 ಹುದ್ದೆಗಳನ್ನು ಹಾಗೂ ಗ್ರೂಪ್-ಸಿ 34 ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿಗೊಳಿಸುವ ಪ್ರಸ್ತಾವನೆಯು ಸಹ ಪರಿಶೀಲನೆಯಲ್ಲಿರುತ್ತದೆ.<br><br>ಸಂಸ್ಥೆಯಲ್ಲಿ ವಿವಿಧ ಶ್ರೇಣಿ/ ವೃಂದದ ಒಟ್ಟು 3387 ಹುದ್ದೆಗಳು ಖಾಲಿ ಇದ್ದು, ಅನುಸೂಚಿಗಳ/ ಆಡಳಿತ ನಿರ್ವಹಣೆಗೆ ಅವಶ್ಯವಿರುವ ಹುದ್ದೆಗಳನ್ನು ಅಗತ್ಯತೆಗೆ ಅನುಗುಣವಾಗಿ ಕಾಲಕಾಲಕ್ಕೆ ನೇಮಕ ಮಾಡಿಕೊಳ್ಳಲು ಕ್ರಮವಹಿಸಲಾಗುತ್ತಿದೆ.</td></tr>
</table>

ಸಂಖ್ಯೆ: ಟಿಡಿ 9 ಟಿಸಿಕ್ಯೂ 2025

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಮುಜರಾಯಿ ಸಚಿವರು